**<u>ದಿಃ 12.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಪಿ.ಆರ್.ಎಂ ವಕೀಲರಿಂದಃ</u>**

**<u>ವಾದಿಯ ಪರವಾಗಿಃ</u>**

**23)** ನನ್ನ ಚಿಕ್ಕಪ್ಪನಾದಂತಹ ಈರಪ್ಪ ಈತನು ದಿನಾಂಕಃ 28.08.2020 ರಂದು ಮೃತಪಟ್ಟಿರುತ್ತಾರೆ. ನಮ್ಮ ಚಿಕ್ಕಪ್ಪನಾದ ಈರಪ್ಪನಾದ ಈತನ ವಯಸ್ಸು ದಿನಾಂಕಃ 07.04.2015 ರಂದು ಅಂದಾಜು ಆತನ ವಯಸ್ಸು 70 ರಿಂದ 72 ವರ್ಷ ಇರಬಹುದು. ಅದೇ ರೀತಿ ನಮ್ಮ ಚಿಕ್ಕಪ್ಪನಾದ ಈರಪ್ಪ ಈತನ ಜನ್ಮದಿನಾಂಕ ಮತ್ತು ಈಸ್ವಿ ಗೊತ್ತಿರುವದಿಲ್ಲ. ಮೃತ್ಯು ಪತ್ರ ಬರೆಯುವಾಗ ನನ್ನ ಚಿಕ್ಕಪ್ಪನಾದ ಈರಪ್ಪನ ವಯಸ್ಸು ಎಷ್ಟು ಇತ್ತು ಎಂದು ಬರೆಯಿಸಲಾಗಿದೆ ಎಂದು ನನಗೆ ಗೊತ್ತಿರುವದಿಲ್ಲ. ದಿನಾಂಕಃ 07.04.2015 ರಂದು ನಮ್ಮ ಚಿಕ್ಕಪ್ಪನಾದ ಈರಪ್ಪ ಈತನ ವಯಸ್ಸು ಮೃತ್ಯುಪತ್ರದಲ್ಲಿ 77 ವರ್ಷ ಎಂದು ಬರೆಯಿಸಲಾಗಿದೆ ಅಂದರೆ ಸರಿಯಲ್ಲ.

**24)** ನಮ್ಮ ಚಿಕ್ಕಪ್ಪನಾದ ಈರಪ್ಪ ಈತ ಮೃತಪಡುವ ಮೊದಲೇ ನಮ್ಮ ಚಿಕ್ಕಮ್ಮಳಾದ ನೀಲವ್ವ ಈಕೆ ಮೃತಪಟ್ಟಿರುತ್ತಾಳೆ ಅಂದರೆ ಸರಿ. ಈ ಹಿಂದೆ ಶಿವರುದ್ರಪ್ಪ, ಬಸಪ್ಪ ಮತ್ತು ಈರಪ್ಪ ಇವರ ನಡುವೆ ಪಾಲುವಾಟ್ನಿಯಾಗುವ ಅಗಡಿ ಗ್ರಾಮದಲ್ಲಿ ಇರುವಂತಹ ಮನೆಗಳಿಗೆ ಸಂಬಂಧಿಸಿದಂತೆ ಪಾಲುವಾಟ್ನಿಯಾಗಿತ್ತು ಅಂದರೆ ಸರಿ. ಅದೇ ರೀತಿ ಅಗಡಿ ಗ್ರಾಮದಲ್ಲಿ ಇರುವಂತಹ ಮನೆಗಳು ಮೇಲೆ ಹೇಳಿದ ಮೂರು ಜನ ವ್ಯಕ್ತಿಗಳ ಹೆಸರಿನಲ್ಲಿ ಪ್ರತ್ಯೇಕವಾಗಿ ಪಾಲುವಾಟ್ನಿಯಾಗಿದ್ದವು ಅಂದರೆ ಸರಿ. ಈರಪ್ಪ ಈತನು ಜೀವಿತ ಕಾಲದಲ್ಲಿ ಆತನ ಪಾಲಿಗೆ ಬಂದಂತಹ ಅಗಡಿ

ಗ್ರಾಮದ ಪಂಚಾಯತಿ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿ ನಂಬರ 1 ರಿಂದ 8 ಇವರಿಗೂ ಸಹ ಪಾಲುವಾಟ್ನಿ ಮಾಡಿಕೊಟ್ಟಿರುತ್ತಾನೆ ಅಂದರೆ ಸರಿ. ವೀರಪ್ಪ ಈತ ಮೃತ ಪಡುವ ಮೊದಲು ನಮ್ಮ ಮನೆಯಲ್ಲಿ ಇದ್ದೇವು ಹಾಗೂ ಪ್ರತಿವಾದಿ ನಂಬರಃ 1 ರಿಂದ 8 ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವು ಮತ್ತು ಈರಪ್ಪನೂ ಸಹ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದ ಅಂದರೆ ಸರಿ. ದಿನಾಂಕಃ 07.04.2015 ರಂದು ಈರಪ್ಪ ಈತನು ನಮ್ಮ ಹೆಸರಿನಲ್ಲಿ ಮೃತ್ಯು ಪತ್ರ ಮಾಡಿಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ, ಏಕೆಂದರೆ ಈರಪ್ಪ ಆತನಿಗೆ ಹೆಚ್ಚಿಗೆ ವಯಸ್ಸಾಗಿದ್ದರಿಂದ ಆತನು ಮೃತ್ಯುಪತ್ರ ಬರೆದುಕೊಡುವ ಸ್ಥಿತಿಯಲ್ಲಿ ಇರಲಿಲ್ಲ, ಆದ್ದರಿಂದ ನಾವು ಸದರಿ ಮೃತ್ಯುಪತ್ರವನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ.

**25)** ನನ್ನ ಹೆಸರು ವೀರಭದ್ರಪ್ಪ ತಂದೆ ಬಸಪ್ಪ ದುಂಡಿ ಅಂತಾ ಇರುತ್ತದೆ ಅಂದರೆ ಸರಿ. ನಾನು ಹತ್ತನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ ಮತ್ತು ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ಮೃತ್ಯುಪತ್ರದಲ್ಲಿ ಈರಪ್ಪ ಈತನ ಹೆಸರು ಈರಪ್ಪ ವೀರಭದ್ರಪ್ಪ ದುಂಡಿ ಎಂದು ಬರೆಯಲಾಗಿದೆ ಅಂದರೆ ಸರಿಯಲ್ಲ. ನಾವು ಮೃತ್ಯುಪತ್ರದಲ್ಲಿ ವೀರಪ್ಪ ದುಂಡಿ ಎಂದು ಸುಳ್ಳು ಸೃಷ್ಟಿ ಮಾಡಿಕೊಂಡು ಸದರಿ ಮೃತ್ಯುಪತ್ರವನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ದಿನಾಂಕಃ 24.09.2020 ರಂದು ನಮ್ಮ ಚಿಕ್ಕಪ್ಪನ ಹೆಸರು ವೀರಪ್ಪ ಮತ್ತು ಈರಪ್ಪ ಅಂತಾ ಎರಡು ಹೆಸರಿನಿಂದ ಕರೆಯುತ್ತಿದ್ದರೂ ನಾನು ಯಾವುದೇ ಪ್ರಮಾಣ ಪತ್ರವನ್ನು ಈ ಪ್ರಕರಣದಲ್ಲಿ ಸಲ್ಲಿಸಿರುವದಿಲ್ಲ. 2015 ನೇ ಇಸ್ವಿಯಲ್ಲಿ ಮೃತ್ಯುಪತ್ರ ಸಿಕ್ಕ ನಂತರ ನಾನು ಕಂದಾಯ ಉಪಆಯುಕ್ತರ ನ್ಯಾಯಾಲಯದಲ್ಲಿ ಮತ್ತು ಜಿಲ್ಲಾಧಿಕಾರಿಗಳ

ನ್ಯಾಯಾಲಯದಲ್ಲಿ ವಕೀಲರಿಗೆ ಪ್ರಕರಣವನ್ನು ಕೊಟ್ಟು ಸದರಿ ಪ್ರಕರಣಗಳಲ್ಲಿ ಹಾಜರಾಗಿರುತ್ತೇನೆ ಅಂದರೆ ಸರಿ. ಜಿಲ್ಲಾಧಿಕಾರಿಗಳು ನ್ಯಾಯಾಲಯದ ಆದೇಶದಲ್ಲಿ ನೀವು ಮೃತ್ಯುಪತ್ರದ ಮೇಲೆ ಸಿವಿಲ್ ಪ್ರಕರಣವನ್ನು ದಾಖಲಿಸಿ ನಿಮ್ಮ ವ್ಯಾಜ್ಯವನ್ನು ಬಗೆಹರಿಸಿಕೆಳ್ಳಿ ಎಂದು ಆದೇಶ ಮಾಡಿದ್ದರು ಅಂದರೆ ಸರಿ. ಸದರಿ ಜಿಲ್ಲಾಧಿಕಾರಿಯವರ ಆದೇಶದ ಮೇಲೆ ನಾನು ಮೃತ್ಯುಪತ್ರದ ಆಧಾರದ ಮೇಲೆ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಮಾಲೀಕನಾಗಿರುತ್ತೇನೆ ಎಂದು ದಾಖಲುಪಡಿಸಿರುವದಿಲ್ಲ. ಏಕೆಂದರೆ ಸದರಿ ಮೃತ್ಯುಪತ್ರವನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದರಿಂದ ನಾನು ಅಂತಹ ಸಿವಿಲ್ ಪ್ರಕರಣವನ್ನು ದಾಖಲುಪಡಿಸಿಲ್ಲ ಅಂದರೆ ಸರಿಯಲ್ಲ.

**26)** ಈರಪ್ಪ ಈತನು ನನ್ನ ಹೆಸರಿನಲ್ಲಿ ಯಾವುದೇ ಮೃತ್ಯುಪತ್ರವನ್ನು ಬರೆದುಕೊಡದೇ ಇದ್ದರೂ ಸಹ ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಪಾಲು ಕೊಡಬಾರದು ಎಂದು ಸುಳ್ಳು ಮೃತ್ಯುಪತ್ರವನ್ನು ಸೃಷ್ಟಿಸಿಕೊಂಡು ಈ ದಾವೆಯಲ್ಲಿ ಹಾಜರುಪಡಿಸಿದ್ದೇವೆ ಅಂದರೆ ಸರಿಯಲ್ಲ . ಮೃತ್ಯುಪತ್ರ ಮಾಡಿಕೊಡುವಾಗ ಈರಪ್ಪನಿಗೆ 78 ರಿಂದ 80 ವರ್ಷ ವಯಸ್ಸಾಗಿತ್ತು, ಆದ್ದರಿಂದ ಆತನಿಗೆ ಯಾವ ದಾಖಲಾತಿಯನ್ನು ಬರೆದುಕೊಡುತ್ತಿದ್ದೇನೆ ಎನ್ನುವ ಬಗ್ಗೆ ಆತನ ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಅಂದರೆ ಸರಿಯಲ್ಲ. ಅಗಡಿ ಗ್ರಾಮದಲ್ಲಿ ಇರುವಂತಹ ರಿ.ಸ.ನಂಬರಃ 458/3 03 ಎಕರೆ 37 ಗುಂಟೆ ಆಸ್ತಿ ಪೈಕಿ ಆತನು 01 ಎಕರೆ 26 ಗುಂಟೆಯಷ್ಟು ಜಮೀನು ಮತ್ತು 30 ಗುಂಟೆಯಷ್ಟು ಆಸ್ತಿಯನ್ನು ಮಾರ್ತಾಂಡಪ್ಪ ಶಿವಣ್ಣನವರ ಇವರ ಹೆಸರಿನಲ್ಲಿ ಆತನ ವೈಯಕ್ತಿಕ ಹಣಕಾಸಿನ ಅಡಚಣೆಗಾಗಿ ಮಾರಾಟ ಮಾಡಿದ್ದಾನೆ ಅಂದರೆ ಸರಿ. ಸದರಿ ಈರಪ್ಪ ಈತನು ಮಾರಾಟ ಮಾಡಿದ ಆಸ್ತಿಯ ಮೇಲೆ ನಾವು ಯಾವುದೇ ಹಕ್ಕನ್ನು ಕೇಳುವದಿಲ್ಲ ಅಂದರೆ ಸರಿ. ದಾವಾ ಆಸ್ತಿಯಲ್ಲಿ ನಮಗೆ ಮತ್ತು ವಾದಿಯರಿಗೆ ಸಮಪಾಲು ಇರುತ್ತದೆ

ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಈರಪ್ಪ ಈತನು ಆತನ ಜೀವಿತ ಕಾಲದಲ್ಲಿ ನಮ್ಮ ಪರವಾಗಿ ಯಾವುದೇ ಮೃತ್ಯುಪತ್ರವನ್ನು ಮಾಡಿಕೊಟ್ಟಿರುವದಿಲ್ಲ ಅಂದರೆ ಸರಿಯಲ್ಲ, ಸದರಿ ಈರಪ್ಪ ಈತನು ಯಾವುದೇ ಮೃತ್ಯುಪತ್ರವನ್ನು ಮಾಡಿಕೊಡದೇ ಇದ್ದರೂ ಸಹ ನಾವು ಅದನ್ನು ಖೊಟ್ಟಿಯಾಗಿ ಸೃಷ್ಟಿಸಿ ಈ ದಾವೆಯಲ್ಲಿ ಹಾಜರುಪಡಿಸಿರುತ್ತೇವೆ ಅಂದರೆ ಸರಿಯಲ್ಲ. ನನಗೆ ಒಬ್ಬನಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.